**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 344/2019**

ಚಾಸಾ-1 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 16-07-2025

| | | |
|---|---|---|
| ಹೆಸರು | : | ನಾಗರತ್ನ |
| ಗಂಡನ ಹೆಸರು | : | ಬಸವರಾಜ ಮೇಟಿ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಪೋಲಿಸ ಇನ್ಸಪೆಕ್ಟರ |
| ವಾಸಸ್ಥಳ | : | ಲೋಕಾಯುಕ್ತ ಕೊಪ್ಪಳ |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ಮಾರ್ಚ 2019 ರಿಂದ ಅಕ್ಟೋಬರ 2019 ರವರೆಗೆ ದೇವಲಾ ಗಾಣಗಾಪುರ ಪೋಲಿಸ ಠಾಣೆಯಲ್ಲಿ ಪೋಲಿಸ ಉಪನೀರೀಕ್ಷಕರು ಎಂದು ಕರ್ತವ್ಯನಿರ್ವಹಿಸಿರುತ್ತೇನೆ.

ದಿನಾಂಕಃ 12-04-2019 ರಂದು ರಾತ್ರಿ 8-10 ಗಂಟೆಗೆ ಠಾಣೆಯಲ್ಲಿದ್ದಾಗ ಭಾತ್ಮಿ ಬಂದಿದ್ದು ಹಸರಗುಂಡಗಿ ಬಸ ನಿಲ್ದಾಣ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಯಾರೋ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಭಾತ್ಮಿ ಬಂದಿದ್ದು 8-15 ಕ್ಕೆ ಪಂಚರನು ಠಾಣೆಗೆ ಕರೆಯಿಸಿ 8-20 ಕ್ಕೆ ಠಾಣೆಯಿಂದ ನಾನು, ಚಾಸಾ 4, 5 ಮತ್ತು 6 ಮತ್ತು ಪಂಚರುಗಳೊಂದಿಗೆ ಹಸರಗುಂಡಗಿ ಗ್ರಾಮಕ್ಕೆ ಹೋಗಿ 8-45 ಕ್ಕೆ ತಲುಪಿರುತ್ತೇವೆ. ತದನಂತರ ಮರೆಯಾಗಿ ನಿಂತು ನೋಡಲಾಗಿ ಬಸ ನಿಲ್ದಾಣದ ಹತ್ತಿರ ಒಬ್ಬ ವ್ಯಕ್ತಿ ಮಧ್ಯ ಮಾರಾಟ ಮಾಡುವುದನ್ನು ನೋಡಿ ಖಚಿತಪಡಿಸಿಕೊಂಡು ಅವನ ಮೇಲೆ ದಾಳಿ ಮಾಡಲು ಆತ ತನ್ನ ಕೈಯಲ್ಲಿದ್ದ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾನೆ. ತದನಂತರ ಓಡಿಹೋದ ವ್ಯಕ್ತಿಯ ಹೆಸರನ್ನು ಸ್ಥಳೀಯರಿಗೆ ವಿಚಾರಿಸಿದಾಗ ಆತನ ಹೆಸರು ಸಂಗಪ್ಪ ತಂದೆ ಸಾಯಿಬಣ್ಣ ಕಟ್ಟಿಮನಿ ಎಂದು ತಿಳಿಸಿರುತ್ತಾರೆ.

ಸದರಿ ವ್ಯಕ್ತಿ ಬಿಟ್ಟು ಹೋದ ಚೀಲದಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇದ್ದು ಸದರಿ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ 90 ಎಮಎಲ್‌ನ Original Choice ವಿಸ್ಕಿಯ 34 ಟೆಟ್ರಾ ಪ್ಯಾಕೆಟುಗಳು ಇದ್ದವು. ಸದರಿ ಅವುಗಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡು ಪಂಚರ ಸಹಿವುಳ್ಳ ಚೀಟಿಗಳನ್ನು ಅವುಗಳಿಗೆ ಅಂಟಿಸಿ ನಮ್ಮ ವಾಹನದ ಬೆಳಕಿನಲ್ಲಿ 8-55 ರಿಂದ 9-55 ರವರೆಗೆ ಜಪಿ ಪಂಚನಾಮೆ ಬರೆದಿರುತ್ತೇವೆ.

ನಂತರ 10-20 ಕ್ಕೆ ಠಾಣೆಗೆ ಬಂದು ಮುದ್ದೆಮಾಲು, ಪಂಚನಾಮೆ ಮತ್ತು ಲಿಖಿತ ವರದಿಯನ್ನು ಮುಂದಿನ ತನಿಖೆಗಾಗಿ ಚಾಸಾ 8 ರವರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**1** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ ಚೀಲವನ್ನು ತೆಗೆದು ಅದರಲ್ಲಿರುವ 90 ML Original Choice ವಿಸ್ಕಿಯ 34 ಟೆಟ್ರಾ ಪ್ಯಾಕೆಟುಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. 1 ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **RMS** ವಕೀಲರಿಂದಃ-</u>

ಮು.ಮಾ. 1 ತರಹದ ಟೆಟ್ರಾ ಪ್ಯಾಕೆಟುಗಳು ಮದ್ಯದ ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಗುನ್ನೆ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಹಸರಗುಂಡಿಗಿ ಕ್ರಾಸ ರಸ್ತೆ, ಪಶ್ಚಿಮಕ್ಕೆ ಸಾಗನೂರಿಗೆ ಹೋಗುವ ರಸ್ತೆ, ಉತ್ತರಕ್ಕೆ ಅಂಗನವಾಡಿ ಕೇಂದ್ರ ದಕ್ಷಿಣಕ್ಕೆ ಸರಕಾರಿ ಶಾಲೆ ಹಸರಗುಂಡಿಗಿ ಇರುತ್ತದೆ. ಸ್ಥಳೀಯರಲ್ಲಿ ಓಡಿಹೋದ ಆರೋಪಿ ಹೆಸರು ತಿಳಿದುಕೊಂಡೆ ಎಂದು ನನ್ನ ವರದಿಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನಾನು ಓಡಿಹೋಗುತ್ತಿರುವ ಆರೋಪಿಯನ್ನು ವಾಹನದ ಬೆಳಕಿನಲ್ಲಿ ನೋಡಿರುತ್ತೇನೆ. ಪಂಚನಾಮೆ ಸಮಯದಲ್ಲಿ ಸ್ಥಳೀಯರ ಹೆಸರು ಬರೆದುಕೊಂಡಿಲ್ಲ. ಚಾಸಾ 2 ಮತ್ತು 3 ರವರು ಯಾವತ್ತೂ ನಮ್ಮ

ಠಾಣೆಯ ಪ್ರಕರಣಗಳಲ್ಲಿ ಪಂಚಸಾಕ್ಷಿದಾರರಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಜಪ್ತಿ ಪಡಿಸಿಕೊಂಡಿರುವ ಮು.ಮ್ಹಾ 1 ಗಳ ಮೊತ್ತ ನನಗೆ ಹೇಳಲು ಬರುವುದಿಲ್ಲ. ನಾವು ಯಾವುದೇ ದಾಳಿ ಮಾಡಿಲ, ಪಂಚನಾಮೆ ಮಾಡಿಲ್ಲ ಮತ್ತು ಪಂಚರ ಸಹಿಯನ್ನು ಠಾಣೆಯನ್ನು ಪಡೆದಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ